ಮಾಹಿತಿಯನ್ನು ಈ ವಿಧಾನ ಮಂಡಲಕ್ಕೆ ಒಪ್ಪಿಸಬೇಕೆಂಬ ಅಭಿಪ್ರಾಯ ನಮ್ಮ ಸರ್ಕಾರದ್ದು ಮತ್ತು ಈ ವಿಧಾನ ಮಂಡಲದ್ದು ಆಗಿರುವುದರಿಂದ ಇದನ್ನು ತರಿಸುತ್ತೇವೆ.

ಶ್ರೀ ಡಿ.ಬಿ.ಚಂದ್ರೇಗೌಡ :- ನಾನು ಒಂದು ಸಲಹೆಯನ್ನು ಕೊಡುತ್ತೇನೆ. The Minister concerned has approved the reply to this question and own his responsibility for having approved the answer should tender his resignation and I would appeal to the Chair to write to the Chief Justice. ಇದು ನನ್ನದಲ್ಲ. ಈ ಸದನಕ್ಕೆ ಸಂಬಂಧಪಟ್ಟ ವಿಚಾರ. ನೀವೇ ಇದನ್ನು ತರಿಸಿ. ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ವಿಚಾರವನ್ನು ಮುಖ್ಯ ನ್ಯಾಯಾಧೀಶರ ಗಮನಕ್ಕೆ ತಂದು ಇಂದಿನ ಈ ಸಭೆಯಲ್ಲಿ ನಾವು ಅಭಿವ್ಯಕ್ತ ಮಾಡಿದಂಥ ಅಭಿಪ್ರಾಯವನ್ನು ಬರೆಯಬೇಕು. because we take it this as insult to the House. The Members work as representatives of the State. ಆದುದರಿಂದ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಪುನಃ ನಾವು, ನೀವು, ಕುಳಿತು ಇದರ ಬಗ್ಗೆ ಚರ್ಚೆಮಾಡುವುದಕ್ಕೆ ಸರ್ಕಾರ ಮತ್ತು ವಿರೋಧಪಕ್ಷ ಅಲ್ಲ. ಒಟ್ಟು ಇಡೀ ಸದನವೇ ಈ ಒಂದು ಅಭಿಪ್ರಾಯಕ್ಕೆ ಬಂದಿದೆ ಎಂದು ತಾವು ಈ ವಿಚಾರವನ್ನು ಮುಖ್ಯ ನ್ಯಾಯಾಧೀಶರ ಗಮನಕ್ಕೆ ತರುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ತಾವು ಈ ಸದನಕ್ಕೆ ಕೊಡಬೇಕು.

ಉಪಾಧ್ಯಕ್ಷೀಣಿಯವರು:- ಆಯಿತು, ಈಗ ಇದರ ಬಗ್ಗೆ ಇನ್ನೂ ಎಷ್ಟು ಚರ್ಚೆಮಾಡಬೇಕು ?

ಶ್ರೀ ವಾಟಾಳ್ ನಾಗರಾಜ್ :- ಇಲ್ಲಿಸರ್ಕಾರಕ್ಕೆ ಉತ್ತರವನ್ನು ಕೊಡುವುದಿಲ್ಲವೆಂದು ಹೇಳಿಲ್ಲ ನೇರವಾಗಿ ವಿಧಾನ ಮಂಡಲಕ್ಕೆ ಕಳುಹಿಸತಕ್ಕಂಥ ಅಗತ್ಯ ಇಲ್ಲ ಎಂದು ಇಲ್ಲಿ ನೇರವಾಗಿ ಹೇಳಿದ್ದಾರೆ. ಇದು ಸರ್ಕಾರದ್ದಾಗಿದ್ದರೆ ಬೇರೆ ಪ್ರಶ್ನೆಯಾಗುತ್ತಿತ್ತು. ಆದರೆ ವಿಧಾನ ಮಂಡಲಕ್ಕೆ ನಾವು ಯಾವುದನ್ನೂ ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ನೇರವಾಗಿ ಹೇಳಿದ್ದಾರೆ. ವಿಧಾನ ಮಂಡಲಕ್ಕೆ ನಾವು ಯಾವುದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ನೇರವಾಗಿ ಹೇಳಿದ್ದು ಇಲ್ಲಿ ಇದೆ.

ಶ್ರೀ ಕೆ.ಹೆಚ್.ರಂಗನಾಥ್:- ಅಲ್ಲ ಅಲ್ಲ ಎಲ್ಲ ಪ್ರಶ್ನೆಗಳು ವಿಧಾನ ಮಂಡಲದ ಮಾಖಾಂತರವೇ ಬರುವುದು. ಪಿ.ಡಬ್ಲ್ಯೂ.ಡಿ ಅವರದು ಕೂಡ ಅದರ ಮುಖಾಂತರವೇ ಬರುತ್ತದೆ. ಅದಕ್ಕೆಮಾನ್ಯ ವಿರೋಧಪಕ್ಷದ ನಾಯಕರು ಸಲಹೆ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ತಮ್ಮ ಕಾರ್ಯಾಲಯವೇ ಉತ್ತರಗಳನ್ನು ತರಿಸುವುದು. ತಮ್ಮ ಕಾರ್ಯಾಲಯದ ಮುಖಾಂತರವೇ ತಮಗೆ ಕಳುಹಿಸಿದ್ದು ತಮ್ಮಿಂದ ನಮಗೆ ಬರುತ್ತದೆ. ಆದರೂ ಕೂಡ ಅಧ್ಯಕ್ಷರನ್ನು ಹೊಣೆ ಮಾಡತಕ್ಕಂಥದ್ದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳು ನೇರವಾಗಿ ಚೀಫ್ ಸೆಕ್ರೆಟರಿಯವರ ಮುಖಾಂತರ ರಿಜಿಸ್ಟ್ರಾರ್‌ರವರಿಗೆ ಪತ್ರ ವ್ಯವಹಾರ ಮಾಡಿ ಪರಿಶೀಲನೆ ಮಾಡತಕ್ಕಂಥದ್ದು ಉತ್ತಮವೆಂದು ನನ್ನ ಭಾವನೆ.

ಉಪಾಧ್ಯಕ್ಷೀಣಿಯವರು:- ಈಗ ಪ್ರಶ್ನೋತ್ತರ ಕಾಲ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ದಿನಾಂಕ 31-3-1992 ರಲ್ಲಿ ಲಿಖಿತಮೂಲಕ ಉತ್ತರಿಸುವ 26ನೇ ಪಟ್ಟಿಯಲ್ಲಿರುವ 14 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 1254, 2326, ಮತ್ತು 2355 ಅನ್ನು ಹೊರತುಪಡಿಸಿ ಇನ್ನು ಉಳಿದ 11 ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.